International Journal of Research in Social Sciences
Vol. 7 Issue 12, December 2017
ISSN: 2249-2496 Impact Factor: 7.081
Journal Homepage: http://www.ijmra.us, Email: editorijmie@gmail.com
Double-Blind Peer Reviewed Refereed Open Access International Journal - Included in the International Serial Directories Indexed & Listed at: Ulrich's Periodicals Directory ©, U.S.A., Open J-Gate as well as in Cabell's Directories of Publishing Opportunities, U.S.A

# IN THE NAME OF DEMOCRACY- ತತ್ವಪದಕಾರ ಬುದ್ಧಿಜೀವಿಗಳು

"**ಸಾಂವಿಧಾನಿಕ ನೈತಿಕತೆ**" ಎಂಬುದು ಸ್ವಾಭಾವಿಕವಾದ ಭಾವನೆಯಲ್ಲ, ಅದನ್ನು ನಾವು ಬೆಳೆಸಿಕೊಳ್ಳಬೇಕು, ನಮ್ಮ ಜನರು ಇದನ್ನು ಇನ್ನು ಕಲಿಯಬೇಕಿದೆ ಎಂದು ತಿಳಿದುಕೊಳ್ಳಬೇಕು. ಏಕೆಂದರೆ ಭಾರತದಲ್ಲಿ ಪ್ರಜಾಪ್ರಭುತ್ವ ಎಂಬುದು ಕೇವಲ ಪ್ರಜಾಪ್ರಭುತ್ವ ವಿರೋಧಿಯಾದ ಭಾರತದ ಮಣ್ಣಿನ ಮೇಲೆ ಹೊದಿಸಿದ ಬಟ್ಟೆಯಷ್ಟೆ.

**ಸಂವಿಧಾನ ರಚನಾ ಸಭೆ- ಡಾ.ಬಿ.ಆರ್.ಅಂಬೇಡ್ಕರ್**

"**ಭಾರತದ ಪ್ರಜೆಗಳಾದ ನಾವು**" ವರ್ತಮಾನ ಸಂದರ್ಭದಲ್ಲಿ ಹಲವು ಬಿಕ್ಕಟ್ಟುಗಳನ್ನಮು ಎದುರಿಸುತ್ತಿದೇವೆ. ಸ್ವಾತಂತ್ರ್ಯಾನಂತರ ಸುಮಾರು ೭೦ವರ್ಷಗಳ ನಂತರವೂ ನಮ್ಮ ದೇಶ ನಾಗರಿಕ, ಸುಸಂಸ್ಕೃತ ದೇಶವಾಗುವಲ್ಲಿ , ಇಲ್ಲಿನ ಪ್ರಜೆಗಳಿಗೆ ಸಮಾನ ನ್ಯಾಯ, ಸಮಾನ ಅವಕಾಶಗಳು, ಸಂಪನ್ಮೂಲಗಳ ಸಮಾನ ಹಂಚಿಕೆ ಹಾಗು ಲಿಂಗ, ಧರ್ಮ, ಜಾತಿ, ಭಾಷೆ, ಪ್ರಾದೇಶಿಕ ಭಿನ್ನತೆ ಇವುಗಳ ತರತಮತೆಯಿಲ್ಲದೆ ಸ್ವತಂತ್ರ್ಯ, ನ್ಯಾಯಯುತ, ಸಮಾನ ಒಳಗೊಳ್ಳುವಿಕೆಯಲ್ಲಿ ಹೇಳಿಕೊಳ್ಳುವಂಥ ಸಾಧನೆ ತೋರಿಲ್ಲ. ರಾಷ್ಟ್ರದ ಮುಖ್ಯವಾಹಿನಿಯಲ್ಲಿ ಕೇಂದ್ರ ಮತ್ತು ಪರಿಧಿಯಲ್ಲಿರುವವರ ರಾಜಕೀಯ,ಸಾಮಾಜಿಕ, ಆರ್ಥಿಕ ಪ್ರಾತಿನಿಧ್ಯತೆಯಲ್ಲಿ ಒಳಗೊಳ್ಳುವಿಕೆ ಹಾಗು ಹೊರಗುಳಿದಿರುವಿಕೆಯ ನಡುವೆ ಅಗಾಧ ಅಂತರವಿದ್ದು, ಇದು ಹೆಚ್ಚಾಗುತ್ತಲೇ ಹೋಗುತ್ತಿದೆ. "**ಸಾಮಾಜಿಕ ನ್ಯಾಯ**"ವು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅಸಹನೆಯ ವಿಷಯವಾಗಿ ಮಾರ್ಪಟ್ಟಿದೆ. ಧರ್ಮ, ಜಾತಿ, ಭಾಷೆ, ಲಿಂಗ, ಪ್ರದೇಶಾಧಾರಿತ ರಾಜಕರಣ ತನ್ನ ತುರೀಯಾವಸ್ಥೆಯನ್ನು ಮುಟ್ಟಿದೆ.

ವಸಾಹತುಶಾಹಿ ಸಂದರ್ಭದ ಕೋಮುವಿದ್ವೇಷದ ಸ್ಮೃತಿ ಹಾಗು ೧೯೯೧ರ ಸಾಮಾಜಿಕ ಮತ್ತು ಆರ್ಥಿಕ ಸಂರಚನೆಯಲ್ಲಾದ ಬದಲಾವಣೆಗಳು ಏಕಧರ್ಮ, ಬಲಾಢ್ಯಜಾತಿ, ಏಕಕೇಂದ್ರೀಯ ಅಧಿಕಾರ ವ್ಯವಸ್ಥೆ, ಪ್ರತಿಷ್ಠಿತ ವರ್ಗಗಳ ಹಿಡಿತದಲ್ಲಿ ಪ್ರಭುತ್ವ, ಗಂಡಿನ ಹೆಚ್ಚುಗಾರಿಕೆ, ಅಸಮಾನ ಭೂಒಡೆತನ, ಬಂಡವಾಳ-ಲಾಭದ ಅಸಮಾನ ಹಂಚಿಕೆಗೆ ಕಾರಣವಾದವು. ಇದರ ಪರಿಣಾಮ ನಿರುದ್ಯೋಗದ ಪ್ರಮಾಣದಲ್ಲಿ ಹೆಚ್ಚಳ, ಇರುವ ಉದ್ಯೋಗ ಕಳೆದುಕೊಳುವ ಭೀತಿ, ಹೊಸ ಉದ್ಯೋಗ ಸೃಷ್ಟಿಯಲ್ಲಿ ಇಳಿಕೆ, ಸಾಮಾಜಿಕ ನ್ಯಾಯದ ಆರ್ಥಿಕ ಮೂಲವಾದ ಸರ್ಕಾರಿ ಉದ್ಯೋಗದಲ್ಲಿ ಇಳಿಕೆ ಇವು ಸಾಮಾಜಿಕ ಹಾಗು ಆರ್ಥಿಕ ಪ್ರಕ್ಷುಬ್ಧತೆಗೆ ಕಾರಣವಾದವು.ಈ ಪರಿಸ್ಥಿತಿಯನ್ನು ಬಗೆಹರಿಸಲು ಬಯಸದ ಯಥಾಸ್ಥಿತಿವಾದಿ ಅಧಿಕಾರಿಕ ಶಕ್ತಿಗಳು ಸಮಾಜದ ಮುಖ್ಯಧಾರೆಯ ಬಹುಸಂಖ್ಯಾತರನ್ನು ರಾಷ್ಟ್ರದ ನೈಜ ಸಮಸ್ಯೆಗಳಿಂದ ವಿಮುಖಗೊಳಿಸಿ, ಧರ್ಮಗಳ ನಡುವೆ ಅಸಹನೆ, ಜಾತಿ ವಿದ್ವೇಷ, ಭಾಷಿಕ ಸಂಘರ್ಷ, ಲೈಂಗಿಕ ಸಾಂಪ್ರದಾಯಿಕತೆ, ಪ್ರಶ್ನಾತೀತ ರಾಷ್ಟ್ರಭಕ್ತಿ, ಮಾರುಕಟ್ಟೆ ಆಧಾರಿತ ಆಧ್ಯಾತ್ಮದ ಕುರುಡು ಉನ್ಮಾದ ಮೊದಲಾದವುಗಳೆಡೆಗೆ ತಿರುಗಿಸಿ ನೈಜ ಸಮಸ್ಯೆಗಳನ್ನು ಮರೆಮಾಚಿದವು.

ಹಾಗಾದರೆ ಈ ಸಮಸ್ಯೆಗಳನ್ನು ಉತ್ತರಿಸಲಾಗದೆ? ಉತ್ತರ ಸಾಧ್ಯವಿದೆ. ಅದೆಂದರೆ 'ಸಾಂವಿಧಾನಿಕ ನೈತಿಕತೆ'ಯನ್ನು ನಾವು ರೂಢಿಸಿಕೊಳ್ಳುವುದು. ಸಂವಿಧಾನಾತ್ಮಕ ಮನುಷ್ಯರಾಗುವುದು. ರಾಷ್ಟ್ರ ನಿರ್ಮಾಣದ ನಮ್ಮ ಬಹುತೇಕ ಸಮಸ್ಯೆಗಳು ಹಾಗೇ ಉಳಿದಿರುವುದಕ್ಕೆ ನಾವು ನಮ್ಮ ಸಂವಿಧಾನಾತ್ಮಕ ಆಶಯಗಳಿಗೆ ಬೆನ್ನು ತೋರಿರುವುದೇ ಆಗಿದೆ.ಗಣ್ಯ ಜೀವನ ಚರಿತ್ರೆಕಾರ, ಇತಿಹಾಸ ತಜ್ಞ ಹಾಗು ಪರಿಸರ ತಜ್ಞ ರಾಮಚಂದ್ರ ಗುಹ ಹಾಗಾಗಿಯೆ ಭಾರತದ ಪ್ರಜಾಪ್ರಭುತ್ವವನ್ನು ೫೦-೫೦ ಪ್ರಜಾಪ್ರಭುತ್ವ ಎಂದಿರುವುದು. ರಾಜಕೀಯವಾಗಿ ಕೇಂದ್ರದಿಂದ-ಗ್ರಾಮಪಂಚಾಯಿತಿಯವರೆಗೆ ಸಾರ್ವತ್ರಿಕ ವಯಸ್ಕ ಮತದಾನವಿರುವ ರಾಜಕೀಯ ಪ್ರಜಾಪ್ರಭುತ್ವವಿದ್ದರೂ ಬಹುಜನರನ್ನು ಸರ್ವರಂಗಗಳಲ್ಲಿ ಒಳಗೊಳ್ಳುವ ಸಾಮಾಜಿಕ ಪ್ರಜಾಪ್ರಭುತ್ವವನ್ನು ನಿರ್ಮಿಸಿಕೊಳ್ಳುವಲ್ಲಿ ನಾವು ಪ್ರಗತಿ ಸಾಧಿಸಿಲ್ಲ.

ISSN: 2249-2496 📖Impact Factor: 7.081

ನಮ್ಮ "**ಮೂಲಭೂತ ಕಾನೂನು**" ಆದ ಸಂವಿಧಾನವನ್ನು ಸಂವಿಧಾನ ತಜ್ಞ ಗ್ರಾನ್‌ವಿಲೆ ಆಸ್ಟಿನ್ '**ಭಾರತ ಸಂವಿಧಾನ ಒಂದು ಸಾಮಾಜಿಕ ಕಡತ**'(Social Document) ಎಂದು ಹೇಳಿದ್ದಾರೆ. ಪು.೧೬. ಭಾರತ ಸಂವಿಧಾನವು ಹಿಂಸೆ, ರಕ್ತಪಾತವಿಲ್ಲದೆ ಜನರ ಜೀವನದಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಕ್ರಾಂತಿಕಾರಕ ಬದಲಾವಣೆ ತರುವ ಪ್ರಜಾಸತ್ತಾತ್ಮಕ ಚಿಂತನಾ ಪ್ರಸ್ಥಾನದ ಒಂದು ಮಾದರಿ ಎಂಬುದು ಅವರ ತಜ್ಞ ಅಭಿಮತ. ನಮ್ಮ '**ಸಂವಿಧಾನದ ಮೂಲಭೂತ ರಚನೆ**'ಯೂ ಇದನ್ನೇ ಪುಷ್ಟೀಕರಿಸುತ್ತದೆ. ಕೇಶವಾನಂದ ಭಾರತಿ ವಿರುದ್ಧ ಕೇರಳ ರಾಜ್ಯ ಪ್ರಕರಣದ ತೀರ್ಪು ನೀಡಿದ ೧೩ ನ್ಯಾಯಾಧೀಶರಲ್ಲಿ ಮುಖ್ಯ ನ್ಯಾಯಮೂರ್ತಿ ಸಿಕ್ರಿ '**ಸಂವಿಧಾನದ ಸರ್ವೋಚ್ಚತೆ**'ಯನ್ನು ಸಂವಿಧಾನದ ಮೂಲಭೂತ ರಚನೆಗಳಲ್ಲಿ ಒಂದು ಎಂದು ತೀರ್ಪಿತ್ತಿದ್ದಾರೆ.ಪು.೫೭೭. ಸಂವಿಧಾನ ತಜ್ಞರಾದ ಎನ್. ಎ. ಪಾಲ್ಖೀವಾಲಾ 'ಸಂವಿಧಾನದ ಸರ್ವೋಚ್ಚತೆ'ಯನ್ನು 'ಸಂಸತ್ತೂ ಸೇರಿದಂತೆ ಎಲ್ಲಾ ಸಂಸ್ಥೆಗಳೂ ಕೇವಲ ಸಂವಿಧಾನದ ಸೃಷ್ಟಿಯಾಗಿದ್ದು , ಅವುಗಳಲ್ಲಿ ಯಾವುದೂ ಸಂವಿಧಾನದ ಮೇಲೆ ಅಧಿಕಾರ ಹೊಂದಲಾರದು' ಎಂದು ವ್ಯಾಖ್ಯಾನಿಸಿದ್ದಾರೆ.

ಸಂವಿಧಾನದ ಮೂಲಭೂತ ರಚನೆಯನ್ನು ಸಂವಿಧಾನದಲ್ಲಿ ಪ್ರತ್ಯೇಕವಾಗಿ ಎಲ್ಲಿಯೂ ಹೇಳಿಲ್ಲವಾದರೂ 'ಭಾರತ ಸಂವಿಧಾನದ ಒಡವೆ' ಎಂದೇ ಕರೆಯಲಾಗುವ 'ಸಂವಿಧಾನದ ಪ್ರಸ್ತಾವನೆ', ಸಂವಿಧಾನದ ಭಾಗ ೩ರ ಮೂಲಭೂತ ಹಕ್ಕುಗಳು, ಭಾಗ ೪ರ ರಾಜ್ಯನಿರ್ದೇಶಕ ತತ್ವಗಳು ಹಾಗೂ ಭಾಗ ೪ಎ ಯ ಮೂಲಭೂತ ಕರ್ತವ್ಯಗಳಲ್ಲಿ ಅವುಗಳನ್ನು ಗುರುತಿಸಬಹುದು. ಈ ಭಾಗಗಳಲ್ಲಿ ಅಡಕವಾದ ಸಾಮಾನ್ಯ ಅಂಶಗಳನ್ನು ಹೀಗೆ ಪಟ್ಟಿ ಮಾಡಬಹುದು. ೧. ಸಾಮಾಜಿಕ, ರಾಜಕೀಯ, ಆರ್ಥಿಕ ನ್ಯಾಯ. ೨. ವಿಚಾರ,ಅಭಿಪ್ರಾಯ, ವಿಶ್ವಾಸ, ಧರ್ಮ, ಪ್ರಶ್ನಿಸುವ ಸ್ವಾತಂತ್ರ್ಯ. ೩. ಅಂತಸ್ತು, ಅವಕಾಶಗಳಲ್ಲಿ ಸಮಾನತೆ. ೪. ದುರ್ಬಲ ವರ್ಗಗಳಿಗೆ ಆರ್ಥಿಕ, ಸಾಮಾಜಿಕ ಸಮಾನಾವಕಾಶ. ೫. ಧಾರ್ಮಿಕ, ಭಾಷೆ, ಪ್ರದೇಶ, ಜಾತಿ, ಲಿಂಗಾತೀತವಾಗಿ ಎಲ್ಲಾ ಜನತೆಯಲ್ಲಿ ಭ್ರಾತೃತ್ವ, ಸಾಮರಸ್ಯ ಭಾವನೆ ಹೊಂದುವುದು. ೬. ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗು ಕಾಪಾಡುವುದು. ೭. ವೈಚಾರಿಕ, ಮಾನವೀಯ, ಜಿಜ್ಞಾಸಾ ಹಾಗು ಸುಧಾರಣಾ ಪ್ರವೃತ್ತಿ ಹೊಂದುವುದು. ಭಾರತದಂತಹ ಬಹುವರ್ಗ, ಬಹುಜಾತಿ, ಬಹುಧರ್ಮ, ಭೌಗೋಳಿಕ ವೈಪರೀತ್ಯತೆ, ಜನಾಂಗಿಕ ಭಿನ್ನತೆ, ಭಿನ್ನ ಸಂಸ್ಕೃತಿ, ಆಚಾರ, ಸಂಪ್ರದಾಯ, ಪದ್ಧತಿಗಳ ಬಹುಬಗೆಯನ್ನು ಹೊಂದಿರುವ ದೇಶಕ್ಕೆ ಈ ಬಗೆಯ ಆಶಯಗಳನ್ನು ಸಂವಿಧಾನಾತ್ಮಕವಾಗಿ ಹೊಂದಿರಬೇಕೆಂದು ನಮ್ಮ ಸಂವಿಧಾನ ಕರ್ತೃಗಳು ಭಾವಿಸಿದ್ದು ಅವರ ವಿವೇಕ, ದೂರದೃಷ್ಟಿಗೆ ದ್ಯೋತಕ.

ನಮ್ಮ ಸಂವಿಧಾನದ ಮುಖ್ಯ ರೂವಾರಿಯಾದ, ಕಾನೂನು ತಜ್ಞರಾದ ಡಾ. ಬಿ. ಆರ್. ಅಂಬೇಡ್ಕರ್ ರವರು ಪಾಶ್ಚಾತ್ಯ ಚಿಂತನಾ ಪ್ರಸ್ಥಾನಗಳು, ಕಾನೂನು ಸಂಹಿತೆಗಳು ಹಾಗು ಸಂವಿಧಾನಗಳನ್ನು ಅಧ್ಯಯನ ಮಾಡಿದ್ದರೂ ಅವರು ಕುರುಡಾಗಿ ಪಾಶ್ಚಿಮಾತ್ಯ ವಿಚಾರಧಾರೆಗಳನ್ನು ಬಹುಸಹಸ್ರ ವರ್ಷಗಳ ಸಾಂಸ್ಕೃತಿಕ ಹಿನ್ನೆಲೆ ಹಾಗು ಇತಿಹಾಸ ಹೊಂದಿರುವ ಆಧುನಿಕ ಭಾರತ ದೇಶಕ್ಕೆ ಅವುಗಳನ್ನು ತದ್ವತ್ತಾಗಿ ಅಳವಡಿಸಲಿಲ್ಲ. ಸಂಕರಶೀಲ ಸಾಂಸ್ಕೃತಿಕ ಇತಿಹಾಸ ಹೊಂದಿರುವ ಭಾರತಕ್ಕೆ ಅವರು ಪೂರ್ವ-ಪಶ್ಚಿಮದ ಚಿಂತನಾ ಪ್ರಸ್ಥಾನಗಳನ್ನು ಸಂಕರಗೊಳಿಸಿ ಸಮಾಜದ ಕಟ್ಟಕಡೆಯವನಿ/ಳಿಗೂ ತಲುಪಬಲ್ಲ ಭವಿಷ್ಯತ್ತಿನ ಭಾರತಕ್ಕೆ ಚಿಮ್ಮುಹಲಗೆಯಾಗಬಲ್ಲ ಸಂವಿಧಾನದ ರಚನೆಗೆ ಅವರು ಒತ್ತುಕೊಟ್ಟರು. ಪೂರ್ವದ, ಎಲ್ಲ ತತ್ವದೆಲ್ಲೆ ಮೀರಿದ, ನಿಂತ ನೆಲದಲ್ಲಿ ಕಾಲೂರಿ, ಅನಿಕೇತನ ಪ್ರಜ್ಞೆಗೆ ಏರಿದ ಬುದ್ಧ-(Every man loves liberty and freedom. Do not interfere with another`s freedom) ಪು,೧೯,೨೦೧೭ ,ಕಬೀರ-(Look within your heart, for there you will find both Karim and Ram; All the men and women of the world are His living forms. Kabir is the child of Allah and of Ram; He is my Guru, He is my Pir) ಪು,೫೬,೨೦೧೭, ರಮಾನಂದ, ರೈದಾಸರಂಥ ದಾರ್ಶನಿಕರು ಹಾಗು ಸ್ವಾತಂತ್ರ್ಯ, ಸಮಾನತೆ, ಮಾನವೀಯತೆ ಹಾಗು ವೈಚಾರಿಕತೆ ಪ್ರತಿಪಾದಿಸಿದ ಎಡ್ಮಂಡ್ ಬರ್ಕ್, ಜಾನ್ ಡ್ಯೂಯಿ, ಅಬ್ರಾಹಂ ಮಾಸ್ಲೋ, ಬರ್ಟ್ರಂಡ್ ರಸೆಲ್ ಮೊದಲಾದ ಪಾಶ್ಚಾತ್ಯ ಚಿಂತಕರ ಚಿಂತನೆಗಳನ್ನು ಸಂವಿಧಾನದಲ್ಲಿ ಮೇಳೈಸಿ ಸಂಕರಶೀಲ ಸಂವಿಧಾನಕ್ಕೆ ಮುನ್ನುಡಿ ಬರೆದರು. ಹಾಗಾಗಿ ಪಶ್ಚಿಮದ ಚಿಂತನೆಗಳೇ ಢಾಳಾಗಿರುವ ಸಂವಿಧಾನ ನಮ್ಮದೆಂಬ ಅಪಸವ್ಯಗಳನ್ನು ಬಹುತೇಕರು ಈಗಲೂ

ನಂಬಿರುವುದು ಸತ್ಯದೂರವಾದದ್ದು. ಆದರೆ ಸಂವಿಧಾನ ರಚನಾ ಸಂದರ್ಭದಲ್ಲೆ ಮಂಥನಗೊಂಡು, ಮೂರ್ತರೂಪ ತಾಳುತ್ತಿದ್ದ ಅವರ 'ಬುದ್ಧ ಮತ್ತು ಆತನ ಧಮ್ಮ'ದಲ್ಲೆ ಪೂರ್ವದ ದಾರ್ಶನಿಕರ ಪ್ರಜಾಸತ್ತಾತ್ಮಕ ಹಾಗು ಸಂವಿಧಾನಶೀಲ ಆಶಯಗಳು ಹರಳುಗೊಂಡ ವಿನ್ಯಾಸವನ್ನು ಕಾಣಬಹುದು. ಈ ಬಗೆಯಲ್ಲಿ ನಮ್ಮ ನೆಲದಲ್ಲಿ ಬೇರುಗಳನ್ನು ಚಾಚಿ ಇಲ್ಲಿನ ಸಾರವನ್ನೂ ಪಡೆದು ಪಶ್ಚಿಮವನ್ನೂ ಅರಗಿಸಿಕೊಂಡು ವಿಶಿಷ್ಟ ಸಂವಿಧಾನವನ್ನು ಡಾ. ಬಿ. ಆರ್. ಅಂಬೇಡ್ಕರ್ ನೀಡಿದರು.

ಈಗಾಗಲೇ ಹಿಂದೆ ಚರ್ಚಿಸಿರುವ 'ಸಂವಿಧಾನದ ಮೂಲ ರಚನೆ'ಯಲ್ಲಿ ಪ್ರಸ್ತಾಪಿಸಿರುವ ಬಹು ಅಂಶಗಳು ಭಾರತದಂತಹ ಬೃಹತ್ ರಾಷ್ಟ್ರದ ಬಹು, ಭಿನ್ನ ಸಂಸ್ಕೃತಿಗಳ ಏಕತೆ, ಸಂಕರತೆ ಹಾಗು ಬಹುತ್ವಕ್ಕೆ ಅನುವಾಗಬಲ್ಲ ಚಿಂತನಾಧಾರೆಗಳು ಬೇರೆಬೇರೆ ಕಡೆ ಭಿನ್ನಧಾರೆಗಳಾಗಿ ಹರಿಯುತ್ತಾ, ಸೇರುತ್ತಾ, ಮತ್ತೆ ಕವಲೊಡೆದು ಮಹಾನದಿಯಾಗಿ ಪ್ರವಹಿಸುವ ಪರಿಸ್ಥಿತಿಯೂ ನಮ್ಮಲ್ಲಿತ್ತು. ಕನ್ನಡ ಪ್ರದೇಶದ ಸಂದರ್ಭದಲ್ಲಿ ಇಂಥದೊಂದು ಪ್ರಕ್ರಿಯೆ ಓತಪ್ರೋತವಾಗಿ ಜನಸಂದರ್ಭದಲ್ಲಿ ಹಾಸುಹೊಕ್ಕಾಗಿತ್ತು. ನಾಥ, ಸಿದ್ಧ, ಬೌದ್ಧ,ಸೂಫಿ, ತಂತ್ರ ಮೊದಲಾದ ಜನಮುಖಿ, ಶ್ರಮಣ, ಅವೈದಿಕ ಧಾರೆಗಳು ಪರ್ಯಾಯ ದಾರ್ಶನಿಕ ಪರಂಪರೆಗಳಾಗಿ ಭಾರತ ಉಪಖಂಡದಲ್ಲೆಂತೋ ಅಂತೇ ಕನ್ನಡ ಪ್ರದೇಶದಲ್ಲೂ ಅಸ್ತಿತ್ವದಲ್ಲಿದ್ದವು. ಈ ಜನಮುಖಿ ದಾರ್ಶನಿಕ ಧಾರೆಗಳ ಬದಲಾದ ಅಧ್ಯಯನ ಸಂದರ್ಭದಲ್ಲಿ ಬಹುಜನರು ಬಳಸುವ ಆರೂಢ ಪರಂಪರೆ, ಶ್ರಮಣ ಪರಂಪರೆ, ತತ್ವಪದಕಾರ ಪರಂಪರೆ ಎಂಬ ಪರಿಭಾಷೆಗಳನ್ನು ಶೈಕ್ಷಣಿಕ ಶಿಸ್ತಿನಲ್ಲಿ ಬಹುಜನತಂತ್ರಕ್ಕೆ ಪೂರಕವಾಗಿ ಇತ್ತೀಚೆಗೆ ಬಳಸಲಾಗುತ್ತಿದೆ. ಸಾಂವಿಧಾನಿಕ ಬಹುತ್ವತೆಯನ್ನು ಎತ್ತಿಹಿಡಿಯುವ ಈ ಪರಿಭಾಷೆಗಳನ್ನು ನಿರ್ದಿಷ್ಟ ಅರ್ಥಚೌಕಟ್ಟಿನಲ್ಲಿ ಬಳಸುತ್ತಿರುವವರು ಕೆ. ಜಿ. ನಾಗರಾಜಪ್ಪ, ರಹಮತ್ ತರೀಕೆರೆ, ನಟರಾಜ ಬೂದಾಳು ಮೊದಲಾದವರು.

ಮೇಲಿನ ಜನದಾರ್ಶನಿಕ ಪರಂಪರೆಗಳನ್ನು ಗಮನಿಸಿದಲ್ಲಿ 'ಬೌದ್ಧ' ಎಂಬುದು ಸಾಂಸ್ಥಿಕ ಚೌಕಟ್ಟಿನಲ್ಲಿ ಕಂಡು ಬಂದರೂ ಅದರ ಭಿನ್ನ ಕವಲುಗಳು ತನ್ನ ಮುಖ್ಯಹಾದಿಯನ್ನು ಬಿಟ್ಟು ಪರ್ಯಾಯ ಹಾದಿ ತುಳಿದವು. ಅಲ್ಲದೆ ಈ ಕವಲುಗಳು ಮೇಲೆ ಉಲ್ಲೇಖಿಸಿದ ಜನದಾರ್ಶನಿಕ ಪಂಥಗಳೊಂದಿಗೆ ಸಹಚರ್ಯೆ ಸಾಧಿಸಿದವು. ಹಾಗೆಯೇ ಉಳಿದೆಲ್ಲಾ ದಾರ್ಶನಿಕ ಪರಂಪರೆಗಳು ತಮ್ಮ ಪಿತೃಧಾರೆಯ ಪರ್ಯಾಯ ಕವಲುಗಳಾಗಿ ಭಿನ್ನ, ಬಹುಧಾರೆಗಳೊಂದಿಗೆ ಸಹಯಾನ ಹೊಂದಿದುವು. ಹೀಗಾಗಿ ಈ ಪಂಥಗಳು 'ಕೇಂದ್ರ, ಏಕ, ಪರಿಶುದ್ಧ, ಶ್ರೇಷ್ಠ' ಎಂಬ ಪಾಂಡಿಕ ಕಲ್ಪನೆಗಳನ್ನು ಮೀರಿವೆ. ಹಾಗಾಗಿಯೇ ಇವು 'ಕೇಂದ್ರ, ಏಕ, ಪರಿಶುದ್ಧ, ಶ್ರೇಷ್ಠ'ತೆಯನ್ನು ಪ್ರತಿಪಾದಿಸುವ 'ಅಲ್ಪಸಂಖ್ಯಾತ ಸುಸಂಸ್ಕೃತ'ರ ಪರಿಕಲ್ಪನೆಗಳನ್ನು ನಿರಾಕರಿಸುತ್ತವೆ, ಅವುಗಳಿಗೆ ಪ್ರತಿ ನಿಲ್ಲುತ್ತವೆ. ಭಿನ್ನ, ಬಹುಮುಖಿ ಧಾರೆಗಳನ್ನು ಪ್ರತಿನಿಧಿಸುವ ಮಾತೃಮೂಲ, ಜನಮುಖಿ ದಾರ್ಶನಿಕ ಧಾರೆಗಳನ್ನು 'ಬತ್ತೀಸ ರಾಗ' ಹಾಡಿದ ಕವಿ ಹೆಚ್. ಎಸ್. ಶಿವಪ್ರಕಾಶರು ಈ ಕಾರಣಕ್ಕಾಗೇ 'ಎಲ್ಲ ಜಾತಿಯ ಮರಗಳ ಕಾಡು' ಎಂದು ಕರೆದಿರುವುದು.

ಭಾರತದ ಸಂವಿಧಾನವನ್ನು ನಾವು ೧೯೪೯ರ ಡಿಸೆಂಬರ್ ನಲ್ಲಿ ಅಧಿನಿಯಮಿಸಿಕೊಂಡಿದ್ದು ಹಲಬಾರಿ ತಿದ್ದುಪಡಿಗೊಳಪಟ್ಟಿದೆ, ಇನ್ನು ಮುಂದೆಯೂ ಆಗಬಹುದು. ಅದೇ ರೀತಿ ಆರೂಢ ಪರಂಪರೆ, ಶ್ರಮಣ ಪರಂಪರೆ, ತತ್ವಪದಕಾರ ಪರಂಪರೆ ಎಂದು ಕರೆಯಲಾಗುವ ಈ 'ಬುದ್ಧಿಜೀವಿ'ಗಳ 'ತತ್ವ'ಗಳೂ ನಿಲ್ಲದೇ ಮುಂದುವರೆದಿದ್ದು ಜೀವಂತವಾಗಿವೆ. ಬೌದ್ಧ, ಶ್ರಮಣ ಪರಂಪರೆಯಲ್ಲಿ ಇದನ್ನು 'ಪ್ರಕ್ರಿಯಾ' ಎನ್ನಲಾಗಿದ್ದು ಸ್ಥಾಪಿತ ಧಾರ್ಮಿಕ ಪಠ್ಯಗಳಂತೆ ಇವು ಸಿದ್ಧ, ಶಾಶ್ವತ ಸಂರಚನೆಗಳಲ್ಲ. ಇವು 'ಪ್ರಕ್ರಿಯೆ'ಯಾಗಿದ್ದು, ಆಗುತ್ತಿರುತ್ತವೆ, ಪರಿವರ್ತನೆಗೊಳ್ಳುತ್ತಿರುತ್ತವೆ. ನಮ್ಮ ಸಂವಿಧಾನದ ಕರ್ತೃಗಳು ತಮ್ಮ ಅಪಾರ ಪರಿಶ್ರಮ, ಶ್ರದ್ಧೆ, ಅಧ್ಯಯನಶೀಲತೆ ಹಾಗೂ ತ್ಯಾಗಗಳ ಮೂಲಕ ಸಾಕ್ಷಾತ್ಕರಿಸಿಕೊಂಡ ಸಾಂವಿಧಾನಿಕ ಆಶಯಗಳು, ತಮ್ಮ ಅಸೀಮ ಜೀವಪರತೆ, ಮಾನವೀಯ ದ್ರವ್ಯ, ಏಕಾಂತ-ಲೋಕಾಂತಕ್ಕೆ ತಳುಕು ಹಾಕುವ ಮೂಲಕ ಸಮಾಜದ ಗತಿಶೀಲತೆಗೆ ಸ್ಪಂದಿಸುವ ಈ 'ತತ್ವಪದಕಾರ ಬುದ್ಧಿಜೀವಿಗಳ'ಲ್ಲಿ, ಅವರ 'ತತ್ವ'ಗಳಲ್ಲಿ ಹೇಗೆ ಪ್ರತಿಮಿಸಿವೆ ಎಂಬುದನ್ನು ಅಭ್ಯಸಿಸುವುದು ಸಾಂವಿಧಾನಿಕ ಪ್ರಜಾಸತ್ತೆಯಲ್ಲಿ ಆಸಕ್ತರಾದವರು, ರಾಷ್ಟ್ರಹಿತದಲ್ಲಿ ತತ್ಪರರಾದವರು ಮಾಡಬೇಕಾದ ಕಾರ್ಯ. ತತ್ವಪದಕಾರರ ಪ್ರತಿಮಿತ ಆಶಯಗಳು ಹೇಗೆ ಸಾಂವಿಧಾನಿಕ ಆಶೋತ್ತರಗಳನ್ನು ಒಳಗೊಂಡಿದೆ ಎಂಬುದನ್ನು 'ತತ್ವ'ಗಳ ಮೂಲಕ ಇಲ್ಲಿ ಶೋಧಿಸುವ ಕೆಲಸ ಮಾಡಿದೆ.

**ಧರ್ಮ-ತತ್ವಪದಕಾರ ಪರಂಪರೆ**

ಮತ-ಧರ್ಮಗಳು ನಮಗೆ ಇಂದು ಔಷಧಿಯೋ, ಅಫೀಮೋ ಸಂದಿಗ್ಧವಾಗಿದೆ. ಅತಿಯಾದ ಔಷಧಿಯ ಬಳಕೆಯೂ ಅಫೀಮಿನಂತೆ ಚಟವಾಗಬಲ್ಲದು, ಮಾರಕವಾಗಬಲ್ಲದು. ಮುಖ್ಯವಾಗಿ ಮತ-ಧರ್ಮ ನಾವೇ ಶೋಧಿಸುವ ಸಂಗತಿಯಾಗಿ ಉಳಿದಿಲ್ಲ. ಪ್ರತಿಷ್ಠಿತ ಶಕ್ತಿಗಳು ವ್ಯಾಖ್ಯಾನಿಸುವ ರೀತಿಯಲ್ಲಿ ನಾವು ಅವುಗಳನ್ನು ಗ್ರಹಿಸುತ್ತಿದ್ದೇವೆ. ಈ ವ್ಯಾಖ್ಯಾನವನ್ನು ನಾವು 'ತತ್ವ'ಕ್ಕೆ ಹಾಕುತ್ತಿಲ್ಲ. ವ್ಯಾಖ್ಯಾನಿಸುವವರ ವ್ಯಾಖ್ಯಾನ ಅವರಿಗೆ ಅನುಕೂಲವಾಗಿರಬಹುದು, ನಮಗೆ ಆಗಲೇಬೇಕೆಂದಿಲ್ಲ ಎಂಬ ಸಣ್ಣ ಅನುಮಾನವೂ ನಮ್ಮನ್ನು ಕಾಡುತ್ತಿಲ್ಲ. ಈ ವ್ಯಾಖ್ಯಾನಗಳ ಸಾಂವಿಧಾನಿಕ ಸಿಂಧುತನದ ಬಗ್ಗೆ ನಮಗೆ ಯಾವುದೇ ಪ್ರಶ್ನೆಗಳಿಲ್ಲ. ಪ್ರಶ್ನಿಸುವುದು ಸಾಂವಿಧಾನಿಕ ಆಶಯಗಳಲ್ಲೊಂದು. ಭಾರತದಂತಹ ಬೃಹತ್ ರಾಷ್ಟ್ರದ ಬಹು, ಭಿನ್ನ ಸಂಸ್ಕೃತಿಗಳ ಸಹಚರ್ಯೆ, ಸಂಕರತೆ ಹಾಗು ಬಹುತ್ವಕ್ಕೆ ಅನುವಾಗಬಲ್ಲ ಚಿಂತನಾಧಾರೆಗಳನ್ನೊಳಗೊಂಡ ಧರ್ಮದ ಪರಿಕಲ್ಪನೆಯನ್ನು ಇಂದು ಏಕ ಜನಸಮುದಾಯ, ಏಕ ಮತಗ್ರಂಥ, ಏಕ ಆರಾಧ್ಯ ದೈವ, ಏಕ ಭೂಪ್ರದೇಶದ ಹಿನ್ನೆಲೆಯ ಪಾಶ್ಚಾತ್ಯರ ಸೆಮೆಟಿಕ್ ಅರ್ಥನಿರ್ವಚನದ ಮತದ ಕಲ್ಪನೆಗೆ ತಂದು ನಿಲ್ಲಿಸಿದ್ದೇವೆ. ಆಧುನಿಕ ಭಾರತದಲ್ಲಿ ಹಿಂದೂಧರ್ಮ ಎಂಬುದು ಒಂದು ಜೀವನ ವಿಧಾನ ಎನ್ನಲಾಗಿದೆ ಹಾಗೂ ಇದು ಒಪ್ಪಿತವಾಗಲ್ಪಟ್ಟಿದೆ. ಆದರೆ ಇಲ್ಲಿ ಎದುರು ನಿಲ್ಲುವ ಪ್ರಶ್ನೆಯೆಂದರೆ ಭಾರತದ ಬಹುಸಂಖ್ಯಾತ ಜನಸಮುದಾಯಗಳಲ್ಲಿ, ಕೇಂದ್ರ ಹಾಗು ಪರಿಧೀಯ ಜನಸಮುದಾಯಗಳಲ್ಲಿ ಇದು ಯಾರ ಜೀವನ ವಿಧಾನವನ್ನು ಪ್ರತಿನಿಧಿಸುತ್ತದೆ ಎಂಬುದು ಮತ್ತು ಈ ವ್ಯಾಖ್ಯಾನಕಾರರ ವ್ಯಾಖ್ಯಾನಕ್ಕೆ ಹೊರಗುಳಿದ ಜನಸಮುದಾಯದ ಪಾಡೇನು ಎಂಬುದು. ತತ್ವಪದಕಾರ ಬುದ್ಧಿಜೀವಿಗಳು ಈ ಡಿಸ್ಕೋರ್ಸನ್ನು ಭಿನ್ನವಾಗಿ ಗ್ರಹಿಸುತ್ತಾರೆ. ಸಾಂಸ್ಥಿಕ ಚೌಕಟ್ಟಿನ ಧರ್ಮವನ್ನು ನಿರಾಕರಿಸುವ ಅವರ ಧರ್ಮದ ಪರಿಕಲ್ಪನೆಗೆ ಸರಹದ್ದುಗಳ ಹಂಗಿಲ್ಲ. ಅಸೀಮ ತತ್ವ ಅವರ ಧರ್ಮ. ಬಾಗಿಲಿಲ್ಲದ ಬಯಲು ಅವರ ಧರ್ಮ. ಕೆಲವು ನಿದರ್ಶನಗಳನ್ನು ಗಮನಿಸಬಹುದು. "**ಏಕಲ್ ಖಾಜಾ, ಸಾಕ್ಷಾತ್ ಶಿವನ, ಹಾನಾ ಆತ್ಮದೊಳಗ**-ಕೂಡಲೂರ ಬಸವಲಿಂಗ" ಪು.೩೮೬,೨೦೦೬. "**ಹುಸೇನಿ ಸಾಹೇಬರ ಬದಿಯಲಿ ಹೋಗಿ ಹಸನಾಗಿ ನಾವು ಬಂದೇವು**-ಅಜ್ಞಾತ ತತ್ವಪದಕಾರ" ಪು.೬೦,೨೦೦೬. "**ಅಂತರಂಗದ ನಮಾಜು, ಸಹಜ ನಿರಂತರ ಮಾಡೋವೊಳ್ಳೇದು, ಭ್ರಾಂತಿಗಳಿಗೆ ತೋರುವುದಲ್ಲ, ಅರಿತು ಗುರುವಿನ ಸೇವೆ ಮಾಡಿದವ ಬಲ್ಲ**-ಖೇಮಣ್ಣ(ಬಂಡೆಗುರು)" ಪು.೧೨೪,೨೦೦೬. "**ವೇದ ಬೇಡ ನಿನಗೆ, ಶಾಸ್ತ್ರ ಬೇಡ, ಗೋಧಿಕಾಳಿನಷ್ಟು ಭಕ್ತಿಯಿದ್ದರೆ ಸಾಕು, ಆವಾವಾ ಉಪವಾಸ ಬೇಡ, ಅಡವಿ ಸೇರಬೇಡ, ಕಾವಿ, ಕಮಂಡಲ ಧರಿಸಲು ಬೇಡ**-ಚಿದಾನಂದ ಅವಧೂತರು" ಪು.೯೩,೨೦೦೬. "**ಏಕೆ ಬಯಲ ಭ್ರಾಂತು ನಿನಗೆ, ಸಾಕು ಪರರ ತಿಳುಹದಿರು, ವಿವೇಕಿಯಾಗಿ ನಿನ್ನ ನೀನೆ ತಿಳಿದು ನೋಡೆಲೋ**-ಮುಪ್ಪಿನ ಷಡಕ್ಷರಿ" ಪು.೯೫,೨೦೦೬. ಇಲ್ಲಿನ ಮತ-ಧರ್ಮದ ಪರಿಕಲ್ಪನೆ, ಚೌಕಟ್ಟುಗಳಿಗೆ ಸಿಲುಕುವುದಿಲ್ಲ. ಜವಾಬ್ದಾರಿ, ಪ್ರಯತ್ನ ನಮ್ಮದೆ. ಇಲ್ಲಿ ನಿರ್ವಚನವೂ ಅನಿರ್ವಚನವಾಗುತ್ತದೆ, ರೂಪು ಬಯಲಾಗುತ್ತದೆ, ಏಕ-ಅನೇಕವಾಗುತ್ತದೆ. ಇವು ಪರಸ್ಪರವಾಗಿರುತ್ತವೆ. ಹಿಂದೂ-ಇಸ್ಲಾಂ ಅಥವಾ ಅವುಗಳ ಒಳಪಂಗಡಗಳ ಬೈನರಿಗಳಿಗೆ ಇಲ್ಲಿ ಅರ್ಥವಿಲ್ಲ. ಸ್ವಾರ್ಥವಿಲ್ಲ. ಲೋಕಾರ್ಥವೇ ಎಲ್ಲಾ.

**ಜಾತಿ, ಮೈಲಿಗೆ, ಗಂಡು-ಹೆಣ್ಣು-ತತ್ವಪದಕಾರರು**

ನಮ್ಮ ಸಮಾಜದ ಕೆಲ ಧರ್ಮಗಳಲ್ಲಿ ಜಾತಿಯೇ ಧರ್ಮದ ಗುರುತಾಗಿದ್ದರೆ, ಇನ್ನು ಕೆಲವು ಧರ್ಮಗಳು ಇತರ ಧರ್ಮಗಳ ಪ್ರಭಾವದಿಂದ ಜಾತಿ, ಮೈಲಿಗೆ, ತರತಮತೆಯನ್ನು ಅಳವಡಿಸಿಕೊಂಡಿವೆ. ಇವು ಪ್ರತಿಷ್ಠೆಯ ಗುರುತೂ ಆಗಿರುವುದು ದುರಂತ. ಭಾರತದ ಬಹುತೇಕ ಸಮಾಜ ಸುಧಾರಕರು, ದಾರ್ಶನಿಕರು, ಸಂತರು, ಬುದ್ಧಿಜೀವಿಗಳು ಈ ತರತಮತೆಯನ್ನು ನಿವಾರಿಸಲು ಇನ್ನಿಲ್ಲದ ಪ್ರಯತ್ನ ಪಟ್ಟಿದ್ದಾರೆ. ತತ್ವಪದಕಾರ ಬುದ್ಧಿಜೀವಿಗಳು ತಮ್ಮೆದುರಿಗೆ ಕಂಡ ಜಾತಿ, ಅದರಿಂದ ಪರಿಭಾವಿಸುತ್ತಿದ್ದ ಕಲ್ಪಿತ ಮೈಲಿಗೆ, ಗಂಡು ಹೆಣ್ಣಿನ ಅಸಮಾನ ಸಂಬಂಧ ಇವುಗಳ ತರತಮತೆಯನ್ನು ಎಚ್ಚರದಿಂದ ಗಮನಿಸಿದ್ದಾರೆ. ಅದಕ್ಕೆ ತಮ್ಮ ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ. ಆಧ್ಯಾತ್ಮ ಹಾಗು ಲೌಕಿಕ ಇವುಗಳ ಮಧ್ಯೆ ಸಂಬಂಧವಿಲ್ಲವೆಂದು ಅವರು ಭಾವಿಸಲಿಲ್ಲ. ಮೇಲಿನ ಸಂಕಥನಗಳ ಬಗ್ಗೆ ತಮ್ಮ 'ತತ್ವ'ವನ್ನು ಹಣಿಸಿರುವ ರೀತಿ ಇಂತು. "**ಭಿನ್ನಭೇದವ ಮಾಡಬ್ಯಾಡಿರೋ, ಇದರ ಉನ್ನತನವನು ಚನ್ನಾಗಿ ತಿಳಿಯಿರೋ, ಅಯ್ಯ-ಹೊಲೆಯರ ಮನೆಯಲ್ಲಿ, ಮಾದಿಗರ ಮನೆಯಲ್ಲಿ, ಕುರುಬರ ಮನೆಯಲ್ಲಿ, ಗೌಡರ ಮನೆಯಲ್ಲಿ, ಬಾಡು ತಿನ್ನೋದು ನೋಡು ಬೆಕ್ಕು, ಇಂಥ ಸರ್ವ ಜಾತಿಯಳಗೆ, ಬೆರೆತು ಹೋಗಿರೋ ನಮ್ಮ ಬೆಕ್ಕು**-ಅಜ್ಞಾತ ತತ್ವಪದಕಾರ" ಪು,೬೮,೨೦೦೬. "**ತೊಗಲೊಳು ತೊಗಲೊಕ್ಕು ತಗಲಿ ಬಂದವ ನೀನು, ತಗಲ ಮಾತಾಡುವುದೇನಣ್ಣ, ಇದರ ಬಗಿಯ ತಿಳಿಯದೆ ಬಗೆದು ಮಾತಾಡಿದರೆ**

**ನಗೆಗೇಡಿ ಕಾಣುತಾದಣ್ಣ**-ಕಡಕೋಳ ಮಡಿವಾಳಪ್ಪ" ಪು.೧೦೩,೨೦೦೬. "**ಹಾಟ್ಯಾ ಹಾಟ್ಯಾನುಬ್ಯಾಡ ಹಾಟ ಸಣ್ಣದಲ್ಲ, ಹಾಟಿನಲಿ ಜಗದಾಟ ಉತ್ಪನ್ನವಾಯಿತಲ್ಲ**-ಬಿದನೂರ ಗಂಗಮ್ಮ" ಪು.೧೮೬,೨೦೦೬. "**ಹಮ್ ಭೀ ಕಹತೆ ತುಮ್ ಭೀ ಕಹತೇ, ಮಾಡಬ್ಯಾಡರೀ ಮೇಲಿನ ಶೀಲಾ, ಗುರು ಮಡಿವಾಳನ ಹೋಕರ್ ಬೋಲೆ ತೊಳೆಬೇಕರಿ ಒಳಗಿನ ಮೈಲಾ**-ಚೆನ್ನೂರ ಜಲಾಲಸಾಹೇಬ"ಪು,೧೮೬.೨೦೦೬. "**ಸತಿಲಿಂದ ಸದ್ಗತಿ ಪತಿಲಿಂದ ಪರಲೋಕೆಂದು ಬರೆದಾರ ಪುರಾಣ**-ಸಾವಳಗಿ ಮಹ್ಮದ್ ಸಾಬ" ಪು,೨೨೦,೨೦೦೬. ಮೇಲಿನ ಉದಾಹರಣೆಗಳಲ್ಲದೆ ರಸ್ತಾಪುರ ಭೀಮಕವಿ, ಜಂಬಗಿ ಶರಣಪ್ಪ, ಕನಕದಾಸ ಮೊದಲಾದವರು ಜಾತಿ, ಮೈಲಿಗೆ, ಗಂಡಿನ ಅಧಿಕಾರಕ್ಕೆ ಒಳಪಟ್ಟ ಪುರುಷಕೃತ, ಸಂಪ್ರದಾಯಬದ್ಧ ಹೆಣ್ಣುತನದ ಬಯಸುವಿಕೆ ಮೊದಲಾದ ಅಸಮತೆಗಳ ಬಗ್ಗೆ, ಜೈವಿಕ ಭಿನ್ನತೆಗಳ ಹೇವರಿಕೆಯ ಬಗ್ಗೆ, ಜಾತಿ, ಲಿಂಗ, ಧರ್ಮಗಳ ಭೇದವಿಲ್ಲದೆ, ಖಂಡತುಂಡವಾಗಿ, ಅತ್ಯಂತ ನಿರ್ದಾಕ್ಷಿಣ್ಯವಾಗಿ ನಿಷ್ಠುರವಾಗಿ ಖಂಡಿಸಿದ್ದಾರೆ. ಆಧ್ಯಾತ್ಮ, ಲೌಕಿಕದಲ್ಲಿ ಭೇದ ಕಾಣದೆ ಅವನ್ನು ಬದುಕಿನ ಪ್ರಕ್ರಿಯೆಯೆಂದು ಭಾವಿಸಿದ ಈ ಬುದ್ಧಿಜೀವಿಗಳು ಲೋಕವು ತಾನು ಸಹಜವೆಂದು ಭಾವಿಸಿದುದನ್ನು ಅಸಹಜವೆಂದು ಬಗೆದು ತಾವು ತಮಗನಿಸಿದ್ದನ್ನು ನಿರ್ಭಿಡೆಯಿಂದ ಸಹಜವಾಗಿ ನುಡಿದು ಅಂತೆ ನಡೆದರು. ಸಂವಿಧಾನದ ಕಾಣ್ಕೆಯನ್ನು ಸಂವಿಧಾನ ಹುಟ್ಟುವ ಮೊದಲು ಕಂಡರು, ಬದುಕಿದರು.

**ಭಾಷೆ-ಸಂಕರತೆ-ತತ್ವಪದಕಾರರು**

ಭಾಷೆ ಜನಸಮೂಹದ ಅಸ್ಮಿತೆಯ ಸಂಕೇತ. ಅದು ಒಂದುಗೂಡಿಸುವ ಸಾಧನವೂ ಹೌದು, ಬೇರ್ಪಡಿಸುವ ಸಾಧನವೂ ಹೌದು. ಸಾಮಾನ್ಯವಾಗಿ ಭಾಷೆಯೊಂದಿಗೆ ಜನತೆಯ ಸಂಬಂಧ ಭಾವುಕವಾಗಿರುತ್ತದೆ. ಕೆಲವೊಮ್ಮೆ ಈ ಭಾವುಕತೆ ಸನ್ನಿಯಾಗಿ ಬದಲಾಗುತ್ತದೆ. ಆಗ ಭಾಷೆ ಶುದ್ಧತೆಯ, ಮಡಿವಂತಿಕೆಯ, ಅನ್ಯ ಭಾಷೆಯನ್ನು ದೂರೀಕರಿಸುವ ಮಾತಾಡುತ್ತದೆ. ಈ ಭಾವುಕತೆ, ಶುದ್ಧತೆ, ಮಡಿವಂತಿಕೆಯ ಪ್ರತಿಷ್ಠೆ, ಮರ್ಯಾದೆ ಮೀರಿದರೆ ಭಾಷೆ ರಕ್ತದ ಮಾತನ್ನೂ ಆಡುತ್ತದೆ. ಭಾಷೆಯ ಬಗೆಗೆ ತತ್ವಪದಕಾರರ ನಿಲುವು ಭಿನ್ನವಾಗಿದೆ. ಬಯಲೇ ಭಾಷೆಯಾದವರಿಗೆ ಭಾಷೆ ರೂಪವಾಗುತ್ತದೆ. ಸರಹದ್ದುಗಳಿಲ್ಲದ ಅಸೀಮದ ಬಯಕೆಯವರಿಗೆ ಭಾಷೆ ಮಿತಿಯಾಗಬಲ್ಲದು. ಆಗ ಭಾಷೆ ಸೂತಕವೂ ಆಗುತ್ತದೆ. ಆದರೆ ಬಯಲ ಬಯಕೆಯವರೂ ಲೋಕವ್ಯವಹಾರಿಗಳಾಗಬೇಕಾದುದರಿಂದ, ಸಮಾಜದಲ್ಲಿ ಅದು ಅನಿವಾರ್ಯವೂ ಆದುದರಿಂದ ಮಾತು ಜ್ಯೋತಿರ್ಲಿಂಗವೂ ಆಗುತ್ತದೆ. ಆದರೆ ಸಹಜಿಗಳಿಗೆ ಭಾಷೆ ಒಂದು ಸಾಧನ, ಸಲಕರಣೆ. ಆದ್ದರಿಂದ ಅವರಿಗೆ ಭಾಷೆಯನ್ನೂ ಬಯಲಾಗಿಸಿಕೊಳ್ಳುತ್ತಾರೆ. ಆಗ ಭಾಷೆ ಶುದ್ಧತೆಯ, ಮಡಿವಂತಿಕೆಯ, ಅನ್ಯ ಭಾಷೆಯನ್ನು ದೂರೀಕರಿಸುವ ಮಾತಾಡುವುದನ್ನು ಬಿಡುತ್ತದೆ. ಎಲ್ಲ ಭಾಷೆಗಳೂ ಬಯಲಿನ ಮಾತಾಡುತ್ತವೆ. 'ತತ್ವ'ದ ಎದುರು ಎಲ್ಲ ಭಾಷೆಗಳೂ ಸಮಾನವಾಗುತ್ತವೆ. ಆದ್ದರಿಂದಲೇ ತತ್ವಪದಕಾರರು ಭಾಷಿಕ ಏಕರೂಪತೆಯ ಚೌಕಟ್ಟನ್ನು ಮುರಿದು ಸಂಕರ ಅಥವಾ ಭಾಷಿಕ ಬಹುತ್ವದ ಸಂಕಥನ ಕಟ್ಟುತ್ತಾರೆ. ಕೆಲವು ಉದಾಹರಣೆಗಳು. "**ನಿರಾಕರಸೆ ಆಕಾರ ಹುವೇ, ವೇದಶಾಸ್ತ್ರಕೆ ನಿಲುಕಿಲ್ಲ, ಹಿಂದೂ ಮುಸ್ಲಮಾನ ಶಾಸ್ತ್ರ ಪಡತೆ ಹೈ, ಗುರುಮನಿ ಕೀಲ ಸಿಗಲಿಲ್ಲ**-ಚೆನ್ನೂರ ಜಲಾಲ ಸಾಹೇಬ" ಪು,೯೦,೨೦೧೨. "**ಕೈಸಾ ಕಾಬುದೇಖಾ ಮೈ, ಕಮಲನೇತ್ರನೆ ಬಂದಿದ್ದ, ಪಕಡೋ ಹಾತೋಂಸೆ, ಪಾಪ ದೋಷಮುಲನ್ನಿ, ಪರಿಹರಿಸಿ ತಾನೆ ಪೋದ. ಮುಝುಕೋ ಶರಂ ಆತೀ ಹೈ, ಮಾಟಲು ವಿಂಟಿ, ಜನರು ಏನಂದಾರಲ್ಲಾ. ಬಾತೋಂಸೆ ಕ್ಯಾ ಕಾಮ್, ಭಯಮೇಮುನ್ನದಿ ಸ್ವಾಮಿ, ಭಗವಂತ ತಾನೇ ಬಲ್ಲ**-ಹಜರತ್ ಕಾಕಿಪೀರಾ" ಪು.೯೩,೨೦೧೨. "**ಬಿಚ್ಚು ಲಡೇರೆ ಭಾಯಿ ಕುಚ್ ಹೋಶ್ ನೈರಹಿ, ಸಬ್ ಭೇದ್ ಜಲಗಯಿ ಸಬೂಬ್ ನಹಿ ಪಾಯಿ. ಒಕ ತೇಲು ಕೊರಕ್ಯಾರೋ ಎವರುಕು ಚೆಪ್ಪೇರೋ, ನೀತಿ ಎರಗದಾನಿಕುಕ ಪುಣ್ಯಮೊಸ್ತದಿರೊ. ಪಂಡ್ರಪುರದ ಚೇಳವ್ವ ಕೊಂಡಿ ಬಿಚ್ಚಿ ಕಚ್ಚಿತವ್ವಾ, ಪುಂಡ ಕೂಡಲೂರೇಶನು ಕಂಡುಹಿಡಿದು ಬಿಟ್ಟನವ್ವಾ**-ಕೂಡಲೂರ ಬಸವಲಿಂಗ" ಪು.೧೦೧,೨೦೧೨. ಇವರಲ್ಲದೆ ಮಹಿಪತಿದಾಸರು, ಮಂಜರ್ಲಾ ಖಾದರ ಸಾಬರು, ಶಿಶುನಾಳ ಶರೀಫರು, ಕೈವಾರ ನಾರೇಯಣರು ಮೊದಲಾದವರ ಪದಗಳಲ್ಲಿ ಕನ್ನಡ, ಉರ್ದು, ತೆಲುಗು ಸಾವಯವವಾಗಿ ಸೇರಿವೆ. ಇವು ಪದ, ಸಾಲು, ಚರಣಗಳಲ್ಲಿ ಅನುವರ್ತಿತವಾಗಿರಬಹುದು. ಆದರೆ ಅವುಗಳನ್ನು ಆಯಾ ರಚನೆಗಳಿಂದ ಬೇರ್ಪಡಿಸಲಾಗದು. ಅವುಗಳ ಸಾಂಗತ್ಯದ ಅನುರೂಪತೆ ಹಾಗಿದೆ. ಭಾಷಿಕ ಭಿನ್ನತೆ ವೈಮನಸ್ಯಕ್ಕೆ ಕಾರಣವಾಗಬಾರದು. ಭಾಷಿಕ ಸಾಹಚರ್ಯೆ ಸಮಾಜ ಹಾಗು ವ್ಯಕ್ತಿಯ ಪ್ರಜ್ಞಾ ಶ್ರೀಮಂತಿಕೆಗೆ ಕಾರಣವಾಗುತ್ತದೆ. ಆದ್ದರಿಂದ ಭಾಷೆಗಳಲ್ಲಿ ತರತಮವಿರಕೂಡದು. ಇದು ಸಂವಿಧಾನದ ಆಶಯ. ತತ್ವಪದಕಾರರು ಆಗಸದ ಕೆಳಗಿನ, ಭೂಮಿಯ ಮೇಲಿನ ಎಲ್ಲ ಸಂಗತಿಗಳ ಬಗ್ಗೆ, ನಿರ್ಭಿಡೆ, ನಿರ್ದಾಕ್ಷಿಣ್ಯತೆ ಹಾಗು ಸಹಜತೆಯಿಂದ ಭಾಷಿಕ ಮಿತಿಗೆ ಒಳಪಡದೆ ತಮ್ಮದೇ ವಿಶಿಷ್ಟ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು

ಯಾವುದೇ ಮಡಿವಂತಿಕೆಯಿಲ್ಲದೆ ತೋರಿದರು. ಈ ಬಗೆಯ ಅಭಿವ್ಯಕ್ತಿ ಸ್ವತಂತ್ರ್ಯತೆ ಇಂದು ಸಾಧ್ಯವೇ? ಭಾಷೆ ಹಾಗು ಭಾಷಿಕ ಸಂಸ್ಕೃತಿ ಸಮಾನವೆಂಬ ಸಂವಿಧಾನದ ಆಶಯ ಈಡೇರಿದೆಯೆ?

**ಆಧ್ಯಾತ್ಮ-ಲೌಕಿಕ-ತತ್ವಪದಕಾರರು**

'ಪೇಳುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ' ಎಂದು ಬದುಕಿನ ರೀತಿಯನ್ನು ವಿಭಾಗಿಸಿ ನೋಡುವ ದ್ವಂದ್ವಮಾನ ದೃಷ್ಟಿಕೋನವೊಂದಿದೆ. ಇದೊಂದು ರೀತಿಯಲ್ಲಿ ರಾಜಮಾರ್ಗ. ಇಂದಿಗೂ ಈ ಮಾರ್ಗದ ಪಯಣ ತುಂಬಿ ಸಾಗುತ್ತಿದೆ. ಇಲ್ಲಿ ಸಾಂಸಾರಿಕ ಜೀವನವೊಂದು, ಆಧ್ಯಾತ್ಮ ಜೀವನವಿನ್ನೊಂದು. ಎರಡೂ ಬೇರೆ ಬೇರೆ. ಸಂಸಾರದ ಅಗತ್ಯಗಳು ಬೇರೆ. ಆಧ್ಯಾತ್ಮದ ಅಗತ್ಯ ಬೇರೆ. ಸಂಸಾರದಲ್ಲಿ ಬಳಲಿದಾಗ ಆಧ್ಯಾತ್ಮ, ಆಧ್ಯಾತ್ಮದ ಏಕತಾನತೆ ಕಾಡಿದಾಗ ಸಂಸಾರ ಅಥವಾ ಲೌಕಿಕ. ಸಂಸಾರದ ಅಗತ್ಯತೆಗಳನ್ನು ಪೂರೈಸಲು ಮಾರುಕಟ್ಟೆ ಮುಕ್ತವಾಗಿದೆ. ಹಾಗೆಯೆ ಆಧ್ಯಾತ್ಮದ ತುರೀಯವನ್ನು ಕಾಣಿಸಲು ಬಗೆಬಗೆಯ ಸಿದ್ಧ ಮಧ್ಯವರ್ತಿಗಳಿದ್ದಾರೆ. ನಡೆಯ ಬೆಂಬಲವಿಲ್ಲದ ನುಡಿ ಇವರ ಸರಕು. ಹಾಗೂ ತಮ್ಮದೇ ಸರಿದಾರಿ ಹೊರತು ಅನ್ಯವಲ್ಲ ಎಂದು ಪ್ರತಿಪಾದಿಸುವವರು. ಲೌಕಿಕದ ಜಂಜಡದಿಂದ ಪಾರಾಗಲು ಆಧ್ಯಾತ್ಮದ ಹಾದಿ ತೋರುವವರು. ತತ್ವಪದಕಾರರ 'ತತ್ವ' ಇದಕ್ಕೆ ಭಿನ್ನವಾದುದು. ಇವರ ಸಹಜಯಾನ 'ಅನ್ಯ'ವಾದುದನ್ನು ಸಾಧಿಸುವುದು, ಇರುವುದನ್ನು ಕಡೆಗಣಿಸುವುದು ಎಂಬರ್ಥದಲ್ಲಿಲ್ಲ. ಲೌಕಿಕದ ನಿರಾಕರಣೆ ಅವರ ಸಹಜತೆಯ ಭಾಗವಲ್ಲ. ಲೌಕಿಕ-ಆಧ್ಯಾತ್ಮದ ಇನ್ನೊಂದು ಮುಖ, ಅಥವಾ ವಿಪರ್ಯವಾದುದು. ಹಾಗಾಗಿ ಲೌಕಿಕ-ಆಧ್ಯಾತ್ಮವೆರೆಡೂ ಅವರ ಬದುಕಿನ 'ಸಹಜ ಪ್ರಕ್ರಿಯೆ'ಯಾಗಿವೆ. ಕೆಲವು ನಿದರ್ಶನಗಳು. "**ಏಕೆ ಬಯಲ ಭ್ರಾಂತು ನಿನಗೆ, ಸಾಕು ಪರರ ತಿಳುಹದಿರು, ವಿವೇಕಿಯಾಗಿ ನಿನ್ನ ನೀನೆ ತಿಳಿದು ನೋಡಲ್ಲೆ**-ಮುಪ್ಪಿನ ಷಡಕ್ಷರಿ" ಪು,೯೫.೨೦೦೬. "**ಎಲ್ಲರೊಳಗೋಡಾಡಿಕೊ, ನಿನ್ನೊಳಗೆ ನೀ ಹುಡುಕಾಡಿಕೊ, ಕಾಯದೊಳಗಿನ ಕೀಲ ತಿಳಿದು ಸಾಯದಂತೆ ಮಾಡಿಕೋ**-ಚನ್ನಾರೂಢ" ಪು,೧೨೫.೨೦೦೬. ಭ್ರಾಂತು-ನಿರ್ಭ್ರಾಂತುಗಳನಡುವಣ ಅಭೇದ, ಎಲ್ಲ ಪಂಥಗಳನ್ನು ಅರಸುವ, ತುಳಿಯುವ ಪರಿ, ಚೌಕಟ್ಟಿಗೆ ನಿಲುಕದ ಪಯಣ ಎಲ್ಲವೂ ಅವರಿಗೆ 'ಪ್ರಕ್ರಿಯೆ'ಗಳೆ. ಹಾಗೆಂದು ಲೌಕಿಕದಿಂದ ದೂರವಾದರೇ? "**ಹತ್ತಿರ ಬಂದು ಸೆರಗು ಎಳೆಯುವವನ, ಒತ್ತಿ ಸ್ತನಗಳ ಪಿಡಿಯುವವನ, ಎತ್ತಿ ಚುಂಬನಕೊಟ್ಟು ನಗುವವನ, ಮತ್ತೆ ಎಂಬತ್ತನಾಲ್ಕು ಕಲೆಗಳ ಬಲ್ಲವನ**-ಕೂಡಲೂರ ಬಸವಲಿಂಗ" ಪು,೩೯೩.೨೦೦೬. ಸಾಂಸಾರಿಕ ಸುಖದ, ಲೌಕಿಕ ಸುಖದ ತುರೀಯದ ಚಿತ್ರ ನೀಡುತ್ತಲೇ ಇದನ್ನು ಅಲ್ಲಗಳೆಯದ ಆದರೆ ಇಲ್ಲಿಯೇ ನಿಲ್ಲದ 'ಆಗುವ' ಪ್ರಕ್ರಿಯೆ ಅವರಿಗೆ 'ಸಹಜ'ವಾಗಿದೆ. ಎಲ್ಲವನ್ನೂ ವಿವೇಕದಿಂದ ಪರಿಕಿಸಿ, ಸರಿಯೆನಿಸಿದುದರಲ್ಲಿ ಅತ್ಯುನ್ನತಿ ಸಾಧಿಸುವುದು ವ್ಯಕ್ತಿತ್ವಕ್ಕೆ ಸಾರ್ಥಕತೆಯನ್ನು ನೀಡುತ್ತದೆ. ಸಂವಿಧಾನದ ವಿವೇಕವೂ ಇದೇ ಆಗಿದೆ.

**ಅಧಿಕಾರ-ಪ್ರಶ್ನೆ-ತತ್ವಪದಕಾರರು**

ತತ್ವಪದಕಾರ ಬುದ್ಧಿಜೀವಿಗಳು ಅಧಿಕಾರಿಕ ರಚನೆಗಳನ್ನು ಉಪೇಕ್ಷಿಸಿ ತಮ್ಮದೇ ಮಾರ್ಗದಲ್ಲಿ ನಡೆದವರು. ಲೋಕವಿರೋಧಿಗಳೆನಿಸಿಕೊಂಡವರು. ರಾಜಕೀಯ, ಧರ್ಮ, ಜಾತಿ, ಭಾಷೆ, ಗಂಡು-ಹೆಣ್ಣು, ಆಧ್ಯಾತ್ಮ-ಲೌಕಿಕ, ಮೊದಲಾದ ರಾಚನಿಕ ಸಂಸ್ಥೆಗಳ ಅಧಿಕಾರವನ್ನು ಪ್ರಶ್ನಾತ್ಮಕವಾಗಿ ನೋಡಿದವರು. ಆದರೂ ಅದರೊಟ್ಟಿಗೆ ಒಡನಾಡಿ ಅವು ನಿರಂಕುಶವಾದಾಗ, ತನ್ನತನಕ್ಕೆ ಚ್ಯುತಿ ತಂದಾಗ ಅದನ್ನು ಮೀರಲೆತ್ನಿಸಿದವರು. ಬಾಲಲೀಲಾ ಮಹಾಂತ ತತ್ವಪದಕಾರರು ಪ್ರಭುಸತ್ತೆಯನ್ನು ನಿರ್ಭಿಢೆಯಿಂದ ಎದುರಿಸಿ, ವಿರೋಧಿಸಿದರು. ಆಲಯದ ಅಧಿಕಾರಿಕ ರಚನೆಗಳನ್ನು ಬಯಲಿನಲ್ಲಿ ನಿಂತು ಪ್ರಶ್ನಿಸಿದರು. ಬಯಲನ್ನು ಆಲಯಕ್ಕೆ ತಂದರು. ತನ್ಮುಖೇನ ಏಕ, ಕೇಂದ್ರಬದ್ಧ ಚಿಂತನೆಗಳ ಬಗ್ಗೆ ತಮ್ಮದೇ ಅಭಿಪ್ರಾಯವಿಟ್ಟುಕೊಳ್ಳುವ ಸ್ವತಂತ್ರ್ಯತೆಯನ್ನು ತೋರಿದರು. ಸಂಪ್ರದಾಯಬದ್ಧ ಲಿಂಗರಾಜಕೀಯವನ್ನು ದಾಟಲೆತ್ನಿಸಿದರು. ಭಾಷಿಕ ಸಂಕರತೆಯ ತಮ್ಮ ರಚನೆಗಳ ಮೂಲಕವೆ ಸಾಂಸ್ಥಿಕ ಭಾಷಿಕ ರಾಜಕಾರಣಕ್ಕೆ ಎದುರಾದರು, ಜನಭಾಷೆಯ ಜೊತೆ ನಿಂತರು. ತನ್ಮೂಲಕ ಅಭಿವ್ಯಕ್ತಿಯ ಮೇಲಿನ ಸಾಂಸ್ಕೃತಿಕ ಯಜಮಾನಿಕೆಯನ್ನು ಧಿಕ್ಕರಿಸಿ ತಮ್ಮ ಮಾರ್ಗದಲ್ಲಿ ನಡೆದರು. ಪ್ರತಿಷ್ಠಿತ ವರ್ಗದ ರಾಜಕೀಯ ಸಂರಚನೆಗಳೆನಿಸಿದ ಪ್ರಭುತ್ವದ ನಿರಂಕುಶತೆ, ಧರ್ಮ, ಜಾತಿ, ಲಿಂಗ ತರತಮತೆ, ಮೈಲಿಗೆ, ಮುಟ್ಟು, ಭಾಷಿಕ ಶೃಂಖಲತೆ, ಮೊದಲಾದ ಸಮಸ್ಯೆಗಳನ್ನು ದಿಟ್ಟವಾಗೆದುರಿಸಿ ಅದರ ವಿರುದ್ಧ ತಮ್ಮದೇ ಆದ ಪರ್ಯಾಯ ಸಂಕಥನವನ್ನು ಪ್ರಾರಂಭಿಸಿದರು. 'ತತ್ವ'ದಲ್ಲಿ, 'ಸಹಜ'ದಲ್ಲಿ, 'ಪ್ರಕ್ರಿಯೆ'ಯಲ್ಲಿ ಇವುಗಳಿಗೆ ಮಾನ್ಯತೆಯಿಲ್ಲವೆಂದರು. ಧರ್ಮದ ಸಾಂಪ್ರದಾಯಿಕ ಕಲ್ಪನೆಯನ್ನು ಬುಡಮೇಲುಗೊಳಿಸಿದರು. ಇಸ್ಲಾ-

ಹಿಂದೂ ಗುರು ಶಿಷ್ಯರು, ಭಿನ್ನ ಜಾತಿಯ, ಭಿನ್ನ ಲಿಂಗೀಯ, ಭಿನ್ನ ವರ್ಗದ ಜನಸಮೂಹ 'ತತ್ವ'ದ ಬಯಲಲ್ಲಿ ನೆಲೆಗೊಳ್ಳುವ ಅವಕಾಶ ಲಭ್ಯವಾಯಿತು. ಸಂಪ್ರದಾಯಶೀಲ 'ಶ್ರೇಷ್ಠತೆ'ಯ ಕಲ್ಪಿತ ಸಂರಚನೆಯನ್ನು ಭಗ್ನಗೊಳಿಸಿ ಧರ್ಮ, ಸಮಾಜ, ರಾಜಕಾರಣ, ಭಾಷೆ ಮೊದಲಾದ ಸಂಸ್ಥೆಗಳಲ್ಲಿ 'ಸಾಂಕರ್ಯ ಸಂಸ್ಕೃತಿ'ಯನ್ನು ಅನುಸ್ಥಾಪಿಸಿ ಕಲ್ಪಿತ ಕೇಂದ್ರಬದ್ಧ ಶ್ರೇಷ್ಠತೆಯ ರಾಜಕಾರಣದ ಬದಲಿಗೆ ಮಾನವೀಯತೆ, ಜೀವಪರತೆ, ಮನುಷ್ಯ ಸಂಬಂಧಗಳಿಗೆ ಪ್ರಾಧಾನ್ಯತೆ ನೀಡಿದರು. ಎಲ್ಲ ಬಗೆಯ ಅಧಿಕಾರಗಳನ್ನು ನಿರಾಕರಿಸಿ ಎಲ್ಲ ತತ್ವದ ಎಲ್ಲೆ ಮೀರಿ, ನಿರ್ದಿಗಂತವಾಗಿ ಏರಿದ ಚೇತನವಾದರು.

ಮೊದಲಿನ ಮಾತಿಗೆ ಬರುವುದಾದರೆ, ಬೌದ್ಧ, ಸೂಫಿ, ತಂತ್ರ, ನಾಥ, ಸಿದ್ಧ ಮೊದಲಾದ ಶ್ರಮಣ, ಅವೈದಿಕ ಧಾರೆಗಳಲ್ಲಿನ ಇಂತಹ ಆಶಯಗಳು 'ಸಂವಿಧಾನದ ಮೂಲ ರಚನೆ'ಗೆ ಹತ್ತಿರವಿದ್ದು ಇವು ನಮ್ಮ ಪರಂಪರೆಯಲ್ಲಿ 'ಅನ್ಯ'ವಲ್ಲ. ಸಂವಿಧಾನದ ಕರ್ತೃಗಳಲ್ಲಿ ಒಬ್ಬರಾದ ಡಾ. ಬಿ. ಆರ್. ಅಂಬೇಡ್ಕರ್ ತಮ್ಮ ಅದ್ವಿತೀಯ, ವಿಸ್ತೃತ, ಹಾಗು ಆಳವಾದ ಅಧ್ಯಯನ, ಮನನದ ಮೂಲಕ ಪೂರ್ವದ ಇಂತಹ ಚಿಂತನಾಸೆಲೆಯ ಕುರುಹು ಹಿಡಿದರು. ಬೌದ್ಧಧರ್ಮ, ಅದರ ಭಿನ್ನ ಧಾರೆಗಳು, ಹಿಂದೂ-ಇಸ್ಲಾಂನ ಸಂಕರ ಎನಿಸುವ ಸಿಖ್ ಧರ್ಮ, ರಮಾನಂದ, ಕಬೀರ ಮೊದಲಾದ ಪೂರ್ವಸೂರಿಗಳ 'ತತ್ವ'ಗಳು ಹಾಗು ಪಶ್ಚಿಮದ ವಿಬುಧರ ವಿಚಾರಪ್ರಸ್ಥಾನಗಳನ್ನು ಸರಿಹೊಂದಿಸುವ ಪ್ರಯತ್ನ ಮಾಡಿ ಪ್ರಜಾಸತ್ತಾತಕವಾದ ನಮ್ಮ ಸಂಸ್ಕೃತಿಯಂತೆಯೆ ಸಂಕರಶೀಲವಾದ 'ಸಹಜ' ಸಂವಿಧಾನವನ್ನು ರಾಷ್ಟ್ರಕ್ಕೆ ನೀಡಿದರು. ಇದು ಪೂರ್ವ-ಪಶ್ಚಿಮಗಳ ಸಾರವನ್ನು ಹೀರಿ ಸಮೃದ್ಧವಾಗಿ ರೂಪುಗೊಂಡಿದೆ. ಹಾಗಾಗಿ ಸಂಕರ ಪರಂಪರೆಯ ಸೌಹಾರ್ದ ತಳಹದಿಯ ಮೇಲೆ ನಿಂತಿರುವ ನಮ್ಮ ಸಂವಿಧಾನ ಪ್ರತಿಪಾದಿಸುವ ಮೂಲ ಆಶಯಗಳ ಹಾದಿಯಲ್ಲಿ ನಡೆದರೆ ನಮ್ಮ ಹಿಂದಿನ ತಪ್ಪುಗಳನ್ನು ತಿದ್ದಿಕೊಂಡು, ವರ್ತಮಾನದ ಬಿಕ್ಕಟ್ಟುಗಳು, ವಿಕಾರಗಳಿಂದ ಪಾರಾಗಬಹುದು. ಅಲ್ಲದೆ, ಒಳಗೊಳ್ಳುವಿಕೆಯ, ಉದಾರ, ಮಾನವೀಯ ರಾಷ್ಟ್ರ ನಿರ್ಮಾಣದ 'ಪ್ರಕ್ರಿಯೆ'ಯಲ್ಲಿ ಸಾಗಬಹುದು.

**ಅಧ್ಯಯನಕ್ಕೆ ಬಳಸಿಕೊಂಡ ಗ್ರಂಥಗಳು**


೧. ತತ್ವಪದಗಳು- ಸಂ. ಡಾ. ರಂಗಾರೆಡ್ಡಿ ಕೋಡಿರಾಂಪುರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೬

೨. ನಮ್ಮ ಸಂವಿಧಾನ-ಒಂದು ಸುದೀರ್ಘ ವಿಶ್ಲೇಶಣೆ- ಲೇ.ಅಶೋಕ್ ಕುಮಾರ್, ಅಶೋಕ ಪಬ್ಲಿಕೇಷನ್ಸ್, ಬೆಂಗಳೂರು, ೨೦೧೪

೩. INDIA DISSENTS-Ed. Ashok Vajpeyi, Speaking Tiger Publishing Pvt Ltd, 2017

೪. ನುಡಿಸಂಕರ ಸಾಹಿತ್ಯ- ರಹಮತ್ ತರೀಕೆರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.೨೦೧೨
ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ- ಯೋ. ಸಂ. ಡಾ. ಎಸ್.ನಟರಾಜ ಬೂದಾಳು, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೭



**ರವಿ,**
**ಸಹಾಯಕ ಪ್ರಾಧ್ಯಾಪಕ,**
**ಕನ್ನಡ ವಿಭಾಗ,**
**ಸರ್ಕಾರಿ ಪ್ರಥಮದರ್ಜೆ ಕಾಲೇಜು,**
**ಚನ್ನಗಿರಿ.**
**ದಾವಣಗೆರೆ ಜಿಲ್ಲೆ,**
**ಫೋನ್-8197485578.**
**ಇ ಮೇಲ್-ravisowmyars@gmail.com**